

ಸಾತ್ವಿಕನೆಂದು' ತಲೆದೂಗುವಷ್ಟರ ಮಟ್ಟಿಗೆ. ಪ್ರಸಂಗ ಮುಗಿದ ಮೇಲೆ ಸ್ವಾಮೀಜಿಗಳು ಮಾಧವನನ್ನು ಹತ್ತಿರ ಕರೆದು, 'ದಯಮಾಡಿ ಇನ್ನು ಮುಂದೆ ಎಲ್ಲಿಯೂ ಖಳಪಾತ್ರಗಳನ್ನು ಮಾಡದಿರಯ್ಯ. ನಿನ್ನ ವಾಕ್ಚಾತುರ್ಯದಿಂದ ಜನರು ಖಳಪಾತ್ರಗಳೇ ಸರಿಯೆಂದು ತಿಳಿದುಕೊಳ್ಳಬಹುದು' ಎನ್ನುತ್ತಾ, ವಿನಂತಿಸಿ ಹರಸಿದ್ದನ್ನು ಕಣ್ಣಾರೆ ಕಂಡಿದ್ದೆ ಕಿವಿಯಾರೆ ಕೇಳಿದ್ದೆ. ಅದು ಕಲಾವಿದನೊಬ್ಬನಿಗೆ ಸಿಗಬಹುದಾದ ಶ್ರೇಷ್ಠ ಗೌರವವೇ ಸರಿ. ಶಾಶ್ವತವಾಗಿ ಮುಂದೆ ಮಾಧವನ ಖಳಪಾತ್ರಗಳು ಪ್ರೇಕ್ಷಕರಿಗೆ ನೋಡಲು ಸಿಗಲೇ ಇಲ್ಲ.

ನನಗೆ ಎಲ್ಲಕ್ಕಿಂತಲೂ ಹೆಚ್ಚು ಕಾಡಿದ್ದು ಸೀತಾ ವಿಯೋಗದ ಲಕ್ಷ್ಮಣ. ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹಿಂತಿರುಗುವಾಗ, ''ಮಾತೆಯೆ ಮನ್ನಿಸು ಪಾತಕಿ ನಾನಾದೆ'' ತೋಡಿ ರಾಗದ ಭಾಗವತರ ಹಾಡಿಗೆ ಲಕ್ಷ್ಮಣನಾಗಿ, ಅಣ್ಣನ ಆಜ್ಞೆಯಿಂದ ಅಸಹಾಯಕನಾದುದನ್ನು ಚಿತ್ರಿಸುತ್ತಾ ತಾನು ಅತ್ತಿದ್ದು ಮಾತ್ರವಲ್ಲದೆ ಸೀತೆ ಪಾತ್ರಧಾರಿಯೂ ಸೇರಿ, ಇಡೀ ಪ್ರೇಕ್ಷಕವರ್ಗ ಕಣ್ಣೀರು ಹರಿಸುವಂತೆ ಮಾಡಿದ್ದು ಆ ಕಾಲದ ನಿತ್ಯ ಹಸಿರು ನೆನಪು. ಆದರೇನು ಮಾಡುವುದು? ಮಾಧವ ಕಲಾವಿದನಾಗಿ ರಂಗದಲ್ಲಿ ಕುಬೇರನೇ ಆದರೂ, ಜೀವನದಲ್ಲಿ ಅಕ್ಷರಶಃ ಭಿಕ್ಷುಕನಾಗಿದ್ದ.

ಕೈಹಿಡಿದ ಮಡದಿ ಹೆಣ್ಣು ಹಸುಳೆಯೊಂದನ್ನು ನೀಡಿ ಇಹಯಾತ್ರೆ ಮುಗಿಸಿದ ಮೇಲೆ ನೆಮ್ಮದಿಯೆನ್ನುವುದೇ ಮರೀಚಿಕೆಯಾಗಿತ್ತು. ಬೆರಳುಗಳಿಗೆ ಬಿಳಿ ಬಟ್ಟೆ ಸುತ್ತಿ ಅದನ್ನು ಹಾಲಿನಲ್ಲಿ ಅದ್ದಿ ಅದ್ದಿ ಹಸುಳೆಗೆ ಮೊಲೆ ಹಾಲಿನಂತೆ ಉಣಿಸಿ, ಎದೆಯೆತ್ತರಕ್ಕೆ ಬೆಳೆಸಬೇಕಾದರೆ ಪಟ್ಟ ಪಾಡು ಅಷ್ಟಿಷ್ಟೇನು? ಚೌಕಿಯಲ್ಲಿ ನಿತ್ಯ ಹಳೆ ಸೀರೆಯ ತೊಟ್ಟಿಲಿನಲ್ಲಿ ಮಗುವನ್ನು ಮಲಗಿಸಿ ವೇಷಕ್ಕೆ ಕೂತದ್ದು ಯಾವ ಸಹ ಕಲಾವಿದ ತಾನೇ ಮರೆತಾನು? ಚಳಿಯೋ ಜ್ವರವೋ ಎಲ್ಲದಕ್ಕೂ ಚೌಕಿಯಲ್ಲಿನ ಮೇಳದ ದೇವರಿಗೆ ಕೈ ಮುಗಿಯುತ್ತಲೇ ಎದುರಿಸಿದ್ದು. ಯಾವಾಗ ಮಗಳು ಮೈನೆರೆತಳೋ, ಅಂದಿನಿಂದ